ಬದುಕು ಸ್ಥಿರವಾಗಿ ನೆಲೆಗೊಂಡಿರಬೇಕಾದ ಸ್ಥಳ:

**ಅಡುಗೆಮನೆಯೆ ಪರ್ಣಶಾಲೆ**
**ಒಲೆಯೆ ಅಗ್ನಿ ಮಖಜ್ವಾಲೆ**
**ಬಿಡುವಿಲ್ಲದ ಕಟು ತಪಸ್ಯೆ**
**ಹುಣ್ಣಿಮೆಯೂ ಅಮಾವಾಸ್ಯೆ**

ಹೆಣ್ಣಿನ ಕಾರ್ಯಕ್ಷೇತ್ರವು ಮನೆಯ ಹೊಸ್ತಿಲಿನ ಒಳಗೆ, ವಿಶೇಷವಾಗಿ ಒಲೆಯ ಮುಂದೆ ಶುರುವಾಗಿ ಅಲ್ಲಿಯೇ ಮುಗಿಯುತ್ತದೆ. ಸ್ವತಃ ಸುಟ್ಟು ಬೆಂದು ಹೋದರೂ ಅವಳ ಸಂಕಟವು ಅವಳ ಮುಖದಲ್ಲಿ ಕಾಣಿಸಬಾರದು. ಈಗ ಅವಳು ಅವನ ಕಣ್ಣಿಗೆ ಸಂಸಾರದ ರಸರೂಪದ ಚಿರತಾಪಸಿ, ಸುರ ರೂಪಸಿಯಾಗಿ ಕಾಣುತ್ತಾಳೆ. ಇಂತಹ ಇವಳನ್ನು ಕಂಡು ಅವನಿಗೆ ಧೈರ್ಯ, ಸಂತೋಷ ಆಗುತ್ತದೆ. ಇವಳನ್ನು ಮೆಚ್ಚಿ ಪೂಜಿಸುತ್ತಾನೆ.

ಹೀಗೆ ಅವನ ಅಗತ್ಯಗಳನ್ನು ಪೂರೈಸುತ್ತಾ ಇರುವುದೇ ಅವಳ ಜೀವನದ ಗುರಿ ಎನಿಸಬೇಕು. ಈ ಗುರಿಯನ್ನು ಸಾಧಿಸಬೇಕಾದರೆ ಅವಳು ತನ್ನ ಸುತ್ತಲೂ ಹಲವು ಗಡಿಗೆರೆಗಳನ್ನು ಎಳೆದು ಕೊಳ್ಳುವುದು ಅನಿವಾರ್ಯವೇ ಆಗುತ್ತದೆ. ಮೊದಲಿಗೆ ಅವಳು ಹೊಸಿಲು ದಾಟುವ, ಏನನ್ನೋ ಸಾಧಿಸುವ, ಕೀರ್ತಿವಂತಳಾಗುವ ಕನಸನ್ನು ಕಾಣಲು ಹೋಗಲೇಬಾರದು. ಏಕೆಂದರೆ, ಸಾಧನೆ, ಕೀರ್ತಿ ಇಂಥವೆಲ್ಲವೂ ಗಂಡಸಿನ ವಲಯಗಳು, ಅವನ ಗುರಿಗಳು ಮಾತ್ರವೇ ಆಗಿರುತ್ತವೆ. ಇವಳು ಅವನ್ನೆಲ್ಲಾ ಕೀರ್ತಿಶನಿ, ಕುತ್ತ, ಪ್ರಾಪಂಚಿಕ ಪಿತ್ತ ಎಂದು ದೂರವಿರಿಸಬೇಕು. ಅವಳು ಏಕೆ ಹೊಸಿಲು ದಾಟಬಾರದು? 'ಹೊಸಲಾಚೆಗೆ ನೀನೋತರೆ ಹೊಸಲೀಚೆಗೆ ಬೆಳಕಿಲ್ಲ'. ಇನ್ನೂ ಮುಖ್ಯವಾಗಿ 'ಹೆಸರಾಸೆಗೆ ನೀ ಸೋತರೆ, ಉಸಿರಾಸೆಯೆ ನಮಗಿಲ್ಲ' ಇವನ ಅಗತ್ಯಗಳಿಗೆ ಧಕ್ಕೆ ಬರುವುದಿಲ್ಲವೇ?

ಇವನು ನಿಗದಿಪಡಿಸಿದ ಕಾರ್ಯಕ್ಷೇತ್ರದಲ್ಲಿ, ಇವನ ಅಗತ್ಯಗಳನ್ನು ಪೂರೈಸುವುದೇ ತನ್ನ ಬದುಕಿನ ಗುರಿ ಎಂದು ತಿಳಿದು, ತನಗಾಗಿ ಎಂದು ಏನೊಂದನ್ನೂ ಬಯಸದೆ ಅವಳು ಬದುಕು ಸವೆಸಬೇಕು. 'ಗೃಹಿಣಿ, ಗರತಿ, ದೇವಿ, ತಾಯಿ' ಎಲ್ಲವೂ ಆಗಿ 'ಹೆಸರಿಲ್ಲದ ಮಹಿಳೆ'ಯಾಗಿ ಉಳಿದರೆ ಗಂಡುಲೋಕದ, ಈ ಸಂಸ್ಕೃತಿಯ ಸರ್ವಸಮ್ಮಾನಗಳಿಗೂ ಬಾಧ್ಯಳಾಗುವ ಅವಕಾಶ ಅವಳಿಗೆ ದೊರೆಯಲೂಬಹುದು. ಹಾಗೂ ಏನೂ ದೊರೆಯಲಿಲ್ಲವೆಂದರೂ, ದೂರು ಹೇಳಿಕೊಳ್ಳಲು ಯಾರಿದ್ದಾರೆ ಎಂದು ಬೇಡವೇ?

ಕುವೆಂಪು ಅವರ ಈ ಕವನವನ್ನು ಪ್ರಸ್ತಾಪಿಸುವುದು ಇಲ್ಲಿ ನೆಪಮಾತ್ರವಷ್ಟೇ. ಸಾಹಿತ್ಯ ಕೃಷಿ ಹಾಗೂ ಅಲ್ಲಿ ಚಿಂತನೆಗಳು ಪ್ರಧಾನವಾಗಿ ಪಿತೃಪ್ರಧಾನತೆಯ, ಪುರುಷ ಚಿಂತನೆಯ ಉತ್ಪನ್ನಗಳು ಮಾತ್ರವೇ ಆಗಿರುತ್ತವೆ. ಸೃಜನಶೀಲ ಬರಹಗಾರರು ಸಂವೇದನಾಶೀಲರೇ ಆಗಿರುತ್ತಾರೆ ಎಂಬುದೇನೂ ಸುಳ್ಳಲ್ಲ. ಆದರೆ ಈ ಸೃಜನಶೀಲತೆಯ ಸಂವೇದನೆಯು ಸ್ತ್ರೀಲೋಕವನ್ನು ಕಾಣುವಾಗ ಮಾತ್ರ ಪಿತೃಪ್ರಧಾನತೆಯ ಪಾಠಗಳಿಗೆ ಶರಣಾಗಿಬಿಡುತ್ತದೆ. ತನ್ನಿಂದ ಪ್ರತ್ಯೇಕಿಸಿ, ಅನ್ಯವಾಗಿಸಿ, ಯಾವುದೋ 'ವಸ್ತು'ವೊಂದನ್ನು ನೋಡಿದಂತೆ ಆಡುತ್ತದೆ. ಆ 'ವಸ್ತು'ವು ತನಗೆ ಉಪಯುಕ್ತವಾಗುವ ಬಗೆಗಳನ್ನು ಕುರಿತ ಚಿಂತನೆಯು ಮಾತ್ರವೇ ಅಲ್ಲಿ ಉಳಿಯುತ್ತದೆ.

ಪಿತೃಪ್ರಧಾನತೆಯ ಪಾಠಗಳು ಪುರುಷರಲ್ಲಿ ಮಾತ್ರವೇ ಅಲ್ಲ, ಅದೇ ಸಮಾಜದ ಮಹಿಳೆಯರಲ್ಲೂ ಇಳಿದುಬಿಟ್ಟಿರುತ್ತದೆ ಎಂಬ ವಿರೋಧಾಭಾಸದ ಸಂಗತಿಯೂ ಇದೆ. ಇದೇಕೆ ಹೀಗೆ ಎಂಬ ಚರ್ಚೆ ಇಲ್ಲಿ ಬೇಡ. ಆದರೆ, ಮಹಿಳೆಯರು ಕೂಡಾ ತಮ್ಮ ಬರಹಗಳಲ್ಲಿ ಹೆಣ್ಣನ್ನು ಚಿತ್ರಿಸುವಾಗ ಇದೇ 'ಗಂಡು ನೋಟ'ವನ್ನೇ ತಮ್ಮದಾಗಿಸಿಕೊಳ್ಳುತ್ತಾರೆ ಎಂಬುದು ಒಂದು ಕಹಿ ವಾಸ್ತವ.

ಕುವೆಂಪು ಅವರ 'ಮನೆಮನೆಯ ತಪಸ್ವಿನಿಗೆ' ಪದ್ಯ 1950ರಲ್ಲಿ ರಚಿತವಾದದ್ದು. ಕಾಲದಿಂದ ಕಾಲದ ಚರಿತ್ರೆಯ ಹಂತಗಳು ಸಮಾಜದಲ್ಲಿ ಬದಲಾವಣೆಗಳನ್ನು ತರುತ್ತವೆ ಎಂಬಂತೆ ತೋರುವುದಿದೆ. ಆದರೆ ಪಿತೃಪ್ರಧಾನತೆಯ ಚಿಂತನೆಗಳಲ್ಲಿ ಮತ್ತು ಸಮಾಜವು ಪಿತೃ ಪ್ರಧಾನತೆಯು ರೂಪಿಸಿರುವ ಪುರುಷಾಧಿಕಾರದ ಸೂತ್ರಗಳಲ್ಲಿಯೇ ನಡೆಯುತ್ತಿದೆ ಎಂಬುದರಲ್ಲಿ ಹೇಳಿಕೊಳ್ಳುವ ಮೂಲಭೂತ ರಾಚನಿಕ ಬದಲಾವಣೆಗಳಾವುವೂ ಬಂದಿಲ್ಲ ಎಂಬುದೇ ನಮ್ಮ ವಾಸ್ತವ.

ಇತ್ತೀಚಿನ ಬರಹಗಳಲ್ಲಿಯೂ ಈ ಚಿಂತನೆಗಳೇ ಕಾಣುತ್ತವೆ ಎಂಬುದನ್ನು ನೋಡಬಹುದು.